ಉಡುಪಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಆಗಿರುವ ಔಷಧಗಳು

4563 (5226) : ಶ್ರೀ ಸಭಾಪತಿ ಯು. ಆರ್. (ಉಡುಪಿ) ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲಾ ಸರ್ಕಾರಿ ಆಸ್ಪತ್ರೆ ಮತ್ತು ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 2002–03, 2003–04 ರ ಸಾಲಿನಲ್ಲಿ ದಿ: 15–7–2003 ರ ವರೆಗೆ ಸರಬರಾಜು ಆದ ಔಷಧ ಮತ್ತು ಔಷಧಿ ಕೊಳ್ಳಲು ಬಿಡುಗಡೆ ಆಗಿರುವ ಹಣವೆಷ್ಟು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು):

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2002–03 ನೇ ಸಾಲಿಗೆ ಉಡುಪಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೂ. 12,7815/– ಮೌಲ್ಯದ ಔಷಧಗಳನ್ನು ಸರಬರಾಜು ಮಾಡಲಾಗಿದೆ.

2003–04ನೇ ಸಾಲಿಗೆ ಶೇ.40 ರ ಅನುದಾನದಡಿಯಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ ಉಡುಪಿ ಜಿಲ್ಲೆಯ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೂ. 45,000/– ಗಳ ಔಷಧಿಗಳನ್ನು ಖರೀದಿಸಲಾಗಿದೆ. ಇದನ್ನು ದಿ: 4–8–2003 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸರಬರಾಜು ಮಾಡಲು ದಇನಾಂಕ ನಿಗದಿಪಡಿಸಲಾಗಿದೆ.

2002–03ನೇ ಸಾಲಿನಲ್ಲಿ ಜಿಲ್ಲಾ ಆಸ್ಪತ್ರೆ, ಉಡುಪಿಗೆ ಒಟ್ಟು ರೂ. 34,00,000/– ಹಣ ಬಿಡುಗಡೆಯಾಗಿದೆ. ಔಷಧಿ ಖರೀದಿಗಾಗಿ ರೂ. 3320260/– ವೆಚ್ಚ ಮಾಡಲಾಗಿದೆ. 2003–04ನೇ ಸಾಲಿನಲ್ಲಿ ಇಲ್ಲಿಯ ತನಕ ರೂ.7,00,000/– ಬಿಡುಗಡೆಯಾಗಿದೆ ಮತ್ತು ಈ ಹಣಕ್ಕೆ ಔಷಧಿಗಳನ್ನು ಖರೀದಿಸಲಾಗಿದೆ. ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ, ಉಡುಪಿಗೆ 2002–03 ನೇ ಸಾಲಿಗೆ ರೂ. 14,7,5000/– ಹಣ ಬಿಡುಗಡೆಯಾಗಿದ್ದು ಅದರಲ್ಲಿ ಔಷಧಿ ಖರೀದಿಸಲಾಗಿದೆ. 2003–04 ನೇ ಸಾಲಿನಲ್ಲಿ ಇಲ್ಲಿಯ ತನಕ ರೂ. 3,00,000/– ಬಿಡುಗಡೆಯಾಗಿದ್ದು, ಈ ಹಣಕ್ಕೆ ಔಷಧಿ ಖರೀದಿಸಲಾಗಿದೆ.

ರಾಜ್ಯದಲ್ಲಿ ಎಥನಾಲ್ ತಯಾರಿಕೆ

4595 (5339) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಥನಾಲ್ ತಯಾರಿಕೆಗಾಗಿ ಕೇಂದ್ರ ಸರ್ಕಾರ ಸಮ್ಮತಿ ನೀಡಿದೆಯೆ;

ಆ) ಹಾಗಿದ್ದಲ್ಲಿ ಸಕ್ಕರೆ ಉದ್ಯಮದ ಸಂಕಷ್ಟ ಸ್ಥಿತಿಯಲ್ಲಿ ಇದು ರೈತರಿಗೆ ವರ ಪ್ರಧಾನವಾದ ಅಂಶವಲ್ಲವೆ?

ಎಥನಾಲ್ ತಯಾರಿಕೆಯಲ್ಲಿ ಸರ್ಕಾರದ ಪಾತ್ರವೇನು?

ಇ) ಎಥನಾಲ್ ತಯಾರಿಕೆಯನ್ನು ರಾಜ್ಯದಲ್ಲಿ ಪ್ರಾರಂಭಿಸಿದ್ದಲ್ಲಿ ಇದರ ವಿವರಗಳೇನು?

ಈ) ಎಥನಾಲ್ ತಯಾರಿಕೆಯನ್ನು ಪ್ರೋತ್ಸಾಹಿಸುವಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಹೌದು

ಆ) ಹೌದು